ಸಿ. ಸಿ. ನಂ.- 92/21

ಸಿ.ಡಬ್ಲ್ಯೂ.- 4 / ಪಿ.ಡಬ್ಲ್ಯೂ.- 4

1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.
ಸಾಕ್ಷಿಯನ್ನು ದಿನಾಂಕ 10-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಶ್ರೀನಿವಾಸ |
| ತಂದೆಯ ಹೆಸರು - | ಬಾಲನ್ |
| ವಯಸ್ಸು - | 54 ವರ್ಷಗಳು |
| ಉದ್ಯೋಗ - | ನಿವೃತ್ತ ಬ್ಯಾಂಕ್ ನೌಕರ |
| ವಾಸಸ್ಥಳ - | ಎನ್ ಸಿ ಕಾಲೋನಿ, ಹೊಸಪೇಟೆ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಸಾಕ್ಷಿ ನಿಪಿ-7 ಪಂಚನಾಮೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.-7-ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-8, ನಿಪಿ-9 ಭಾವಚಿತ್ರಗಳಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ದಿಃ 15.03.2016 ರಂದು ಬಡಾವಣೆ ಪೊಲೀಸ್ ಠಾಣೆಗೆ ನನ್ನನ್ನು ಕರೆಸಿದ್ದರು ಅಲ್ಲಿ ಚಾಸಾ.1, 5 ರವರು ಇದ್ದರು. ಅಲ್ಲಿ ಗ್ರಾಹಕರ ವೋಚರ್ ಗಳನ್ನು ಪರಿಶೀಲಿಸಿದ್ದರು ಹಾಗೂ ಅದರ ಬಗ್ಗೆ ಪಂಚನಾಮೆ ಜರುಗಿಸಿದರು. ಆ ಸಮಯದಲ್ಲಿ ಡೆಬಿಟ್ ವೋಚರ್ ಗಳನ್ನು ಸಹ ಪರಿಶೀಲಿಸಿದ್ದರು. ಪೃಥ್ವಿ ಃಆರೋಪಿರವರು ಮಾಡಿದ ಡೆಬಿಟ್ ಗಳ ಬಗ್ಗೆ ಪೊಲೀಸರು ನಮ್ಮನ್ನು ವಿಚಾರಿಸಿದರು ಹಾಗೂ ಅದರ ಬಗ್ಗೆ ಪಂಚನಾಮೆ ಜರುಗಿಸಿದ್ದರು. ಸದರಿ ದಾಖಲೆಗಳನ್ನು ಪೊಲೀಸರು ಒಂದು ಕವರ್ ಹಾಕಿ ಸೀಲ್ ಮಾಡಿಕೊಂಡರು. ಸದರಿ ದಾಖಲೆಗಳನ್ನು ನೋಡಿದರೆ ನಾನು ಗುರುತಿಸಬಲ್ಲೆ. ನಮ್ಮ ಸಮಕ್ಷಮ ಅಂದಾಜು 26 ದಾಖಲೆಗಳನ್ನು ಪೊಲೀಸರು ಜಪ್ತಿ ಪಡಿಸಿಕೊಂಡರು. ಸಾಕ್ಷಿ ನಿಪಿ-20 ರಿಂದ ನಿಪಿ-24 ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ನಿಪಿ-10 ಪಂಚನಾಮೆಯಲ್ಲಿರುವ ಪಂಚನಾಮೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.-10-ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-11 ಮತ್ತು ನಿಪಿ-12 ಭಾವಚಿತ್ರಗಳಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಅದೇ ದಿನ ಪೊಲೀಸ್ ಠಾಣೆಯಲ್ಲಿ ಜರುಗಿಸಲಾಯಿತು. ಸದರಿ ಪಂಚನಾಮೆ ಮುಖಾಂತರ ವೋಚರ್ ಗಳು

ಹಾಗೂ 6 ಗ್ರಾಹಕರ ಖಾತಾ ವಿವರಗಳನ್ನು ಜಪ್ತಿ ಪಡಿಸಿಕೊಂಡರು. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ಕೆಲವು ಪತ್ರಗಳನ್ನು ಸಹ ಜಪ್ತಿ ಪಡಿಸಿಕೊಳ್ಳಲಾಯಿತು, ನನಗೆ ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನಾನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ-25 ರಿಂದ 35 ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿಯಲ್ಲಿ ಒಂದು ಪಂಚನಾಮೆಯನ್ನು ಮಧ್ಯಾಹ್ನ 12.00 ರಿಂದ 2.00 ಗಂಟೆಯವರೆಗೂ ಹಾಗೂ ಇನ್ನೊಂದು ಪಂಚನಾಮೆಯನ್ನು ಮಧ್ಯಾಹ್ನ 2.30 ರಿಂದ 4.30 ಗಂಟೆಯವರೆಗೂ ಜರುಗಿಸಿರುತ್ತಾರೆ.

ಪಾಟೀ ಸವಾಲು- ಆರೋಪಿತರ ಪರ ವಕೀಲರಾದ ಶ್ರೀ ಜಿ ವಿ ಪಿ ರವರಿಂದ-

ನಾನು ಬಿ.ಎ. ಪದವೀಧರ. ಬ್ಯಾಂಕಿನ ವ್ಯವಹಾರಗಳ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಹೊಸಪೇಟೆಯಲ್ಲಿರುವ ಎನ್ ಸಿ ಕಾಲೋನಿಯ ಹಿಂದಿನ ಎಸ್.ಬಿ.ಹೆಚ್ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಹಾಗೂ ನನ್ನ ಹೆಂಡತಿಯ ವಿರುದ್ಧ ಹೊಸಪೇಟೆಯ ನ್ಯಾಯಾಲಯಗಳಲ್ಲಿ ಚೆಕ್ ಬೌನ್ಸ ಪ್ರಕರಣಗಳು ಇವೆ ಎಂದರೆ ಸಾಕ್ಷಿ ನನ್ನ ವಿರುದ್ಧ ಇಲ್ಲ, ನನ್ನ ಹೆಂಡತಿಯ ವಿರುದ್ಧ ಇದೆ ಹಾಗೂ ನನ್ನ ಹೆಂಡತಿ ತನಗೆ ಮೋಸ ಆಗಿದೆ ಎಂದು ಇನ್ನೊಂದು ಪ್ರಕರಣ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ಠಾಣೆಯಲ್ಲಿ ಪೊಲೀಸ್ ಕಾನ್ಸಸ್ಟೇಬಲ್ ಬರೆದಿರುತ್ತಾರೆ, ನನಗೆ ಅವರ ಹೆಸರು ಗೊತ್ತಿಲ್ಲ. ಸದರಿ ಪಂಚನಾಮೆಗೆ ಯಾರು ಮಾಹಿತಿ ಕೊಟ್ಟರು ಎಂದರೆ ಸಾಕ್ಷಿ ಗ್ರಾಹಕರು ಹೇಳಿದಂತೆ ಪೊಲೀಸ್ ಕಾನ್ಸಸ್ಟೇಬಲ್ ಅದನ್ನು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-7 ಮತ್ತು ನಿಪಿ-10 ಪಂಚನಾಮೆಗಳನ್ನು ಗ್ರಾಹಕರು ಹೇಳಿದಂತೆ ಪೊಲೀಸ್ ಕಾನ್ಸಸ್ಟೇಬಲ್ ಬರೆದಿರುತ್ತಾರೆ. ಹೀಗೆ ಜರುಗಿಸಿದ ಪಂಚನಾಮೆಗೆ ಪೊಲೀಸರು ಹೇಳಿದಂತೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಮ್ಮ ಸಮಕ್ಷಮ ಜಪ್ತಿ ಪಡಿಸಿಕೊಂಡಿದೆ ಎಂದು ಹೇಳಲಾದ ದಾಖಲೆಗಳ ಮೇಲೆ ನಾನಗಲೀ, ಅಥವಾ ಪೊಲೀಸ್ ಅಧಿಕಾರಿಯಾಗಲೀ ಸಹಿ ಮಾಡಿರುತ್ತೀರಿಯೇ ಎಂದರೆ ಸಾಕ್ಷಿ ನಾನು ಸದರಿ ದಾಖಲೆಗಳಲ್ಲಿ ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ಯಾವುದಾದರೂ ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದು ಹೇಳಲಾದ ದಾಖಲೆಗಳ ಮೇಲೆ ನಾನು ಸಹಿ ಮಾಡಿದರೆ ಮಾತ್ರ ಅವುಗಳನ್ನು ಆ ದಿನ ಜಪ್ತಿ ಪಡಿಸಿಕೊಳ್ಳಲಾಯಿತು ಎಂದು ಹೇಳಬಹುದು ಎಂದರೆ ಸರಿ. ಸದರಿ ಪಂಚನಾಮೆಗಳ ಎಲ್ಲಾ ಪುಟಗಳಿಗೆ ನಾವು ಸಹಿ ಮಾಡಿಲ್ಲ.

ಸದರಿ ಪ್ರಕರಣದಲ್ಲಿ ಎಷ್ಟು ಸಹಿಗಳನ್ನು ಮಾಡಿರುತ್ತೇನೆ ಎಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು, ಎರಡು ಪಂಚನಾಮೆಗಳಿಗೆ ಎರಡು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪಂಚನಾಮೆಗಳಲ್ಲಿ ಬರೆದ ಮಾಹಿತಿಯನ್ನು ನಾನು ಈಗ ವೈಯಕ್ತಿಕವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ನಿಪಿ-10 ಪಂಚನಾಮೆ ಎದುರು ತೋರಿಸಿ ಸದರಿ ಪಂಚನಾಮೆಯ 1 ನೇ ಪುಟದಲ್ಲಿ ಮಾರ್ಚ ಎಂದು ಬರೆದ ಪದವು ಓವರ್ ರೈಟ್ ಅಗಿರುತ್ತದೆ ಹಾಗೂ ಅಲ್ಲಿ ಯಾರ ಸಹಿ ಪಡೆದಿಲ್ಲ ಎಂದರೆ ಸಾಕ್ಷಿ ಅದನ್ನು ಒಪ್ಪಿರುತ್ತಾರೆ. ಯಾವ ವ್ಯಕ್ತಿ ನಿಪಿ-20 ರಿಂದ 35 ದಾಖಲೆಗಳನ್ನು ಹಾಜರುಪಡಿಸಿದರು ಎಂಬ ಬಗ್ಗೆ ಹಾಗೂ ಈ ಎಲ್ಲಾ ದಾಖಲೆಗಳಲ್ಲಿ ಬರೆದಿರುವ ಮಾಹಿತಿ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಬ್ಯಾಂಕಿನ ನೌಕರ ಆಗಿರುವುದರಿಂದ ಇತರೆ ಬ್ಯಾಂಕ್ ನೌಕರರ ಮಾತು ಕೇಳಿ ಪೊಲೀಸರು ಹೇಳಿದಂತೆ ಪಂಚನಾಮೆಗಳಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ಸಮಕ್ಷಮ ಪೊಲೀಸರು ಯಾವುದೇ ದಾಖಲೆಗಳನ್ನು ಜಪ್ತಿ ಪಡಿಸಿಕೊಳ್ಳದೇ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳಲ್ಲಿ ಬರೆದಿರುವ ಸಂಗತಿಗಳ ವೈಯಕ್ತಿಕ ಮಾಹಿತಿ ನನಗಿಲ್ಲ ಎಂದರೆ ಸರಿ. ನನಗೆ ಯಾವುದೇ ವಿಷಯ ಗೊತ್ತಿಲ್ಲದೇ ಇದ್ದರೂ ಪೊಲೀಸರ ಮಾತು ಕೇಳಿ ಈ ದಿನ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.